# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 628 (582) |
| ಸದಸ್ಯರ ಹೆಸರು | : | ಡಾ|| ಚಂದ್ರಶೇಖರ್ ಬ. ಪಾಟೀಲ್<br>(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21-02-2023 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಗರಾಭಿವೃದ್ಧಿ ಇಲಾಖೆಯಿಂದ 2019-20ನೇ ಸಾಲಿನ 14ನೇ ಹಣಕಾಸು ಮೂಲ ಅನುದಾನದಲ್ಲಿ ಉಳಿತಾಯವಾದ ಅನುದಾನದಡಿಯಲ್ಲಿ ಕಾಮಗಾರಿಯ ಕ್ರಿಯಾ ಯೋಜನೆ ಅನುಮೋದನೆಗೆ ಜಿಲ್ಲಾಡಳಿತ ಬೆಳಗಾವಿಯಿಂದ ಪ್ರಸ್ತಾವನೆ ಬಂದಿದ್ದು, ಇಲ್ಲಿಯವರೆಗೆ ಅನುಮೋದನೆ ನೀಡದಿರಲು ಕಾರಣವೇನು; | 2019-20ನೇ ಸಾಲಿನ 14ನೇ ಹಣಕಾಸು ಆಯೋಗದ ಮೂಲ ಅನುದಾನದಲ್ಲಿ ಉಳಿತಾಯವಾದ ಅನುದಾನದಡಿಯಲ್ಲಿ ಜಿಲ್ಲಾಡಳಿತದಿಂದ ಯಾವುದೇ ಪ್ರಸ್ತಾವನೆಯು ಸ್ವೀಕೃತವಾಗಿರುವುದಿಲ್ಲ.<br><br>14ನೇ ಹಣಕಾಸು ಆಯೋಗದ ಅನುದಾನದಡಿ ಕ್ರಿಯಾ ಯೋಜನೆ ಅನುಮೋದನೆಗೆ ಅನುಮೋದನೆ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆ.<br><br>2019-20ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಡಿ ಉಳಿತಾಯವಾದ ಅನುದಾನದಲ್ಲಿ ಹಾರೋಗೇರಿ ಪುರಸಭೆಯ ಕ್ರಿಯಾ ಯೋಜನೆ ತಯಾರಿಸಿ, ಉಪವಿಭಾಗಾಧಿಕಾರಿ, ಚಿಕ್ಕೋಡಿ ಮತ್ತು ಆಡಳಿತಾಧಿಕಾರಿ, ಪುರಸಭೆ ಹಾರೋಗೇರಿ ಇವರಿಂದ ಅನುಮೋದನೆ ಪಡೆದು ಜಿಲ್ಲಾಧಿಕಾರಿ, ಬೆಳಗಾವಿ ಇವರ ಕಾರ್ಯಾಲಯಕ್ಕೆ ದಿನಾಂಕ 19-07-2022ರಂದು ಮುಖ್ಯಾಧಿಕಾರಿ, ಹಾರೋಗೇರಿ ಪುರಸಭೆ ಇವರು ಸಲ್ಲಿಸಿರುತ್ತಾರೆ.<br><br>ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಸಲ್ಲಿಸಿರುವ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ, ಸರ್ಕಾರದಿಂದ ಹೊರಡಿಸಿರುವ ಅನುದಾನ ಬಳಕೆಯ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿರುವುದರಿಂದ ಮಾರ್ಗಸೂಚಿಯನ್ವಯ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸಲ್ಲಿಸಲು ಹಾರೋಗೇರಿ ಪುರಸಭೆಗೆ ಸೂಚಿಸಿ ದಿನಾಂಕ 21-09-2022 ರಂದು ಬೆಳಗಾವಿ ಜಿಲ್ಲಾಡಳಿತದಿಂದ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದೆ. |
| ಆ) | ಬಿಡುಗಡೆಯಾದ ಅನುದಾನದಲ್ಲಿ ಕ್ರಿಯಾ ಯೋಜನೆ ಅಡಿಯಲ್ಲಿ ಅನುದಾನ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗುವುದು; | ಬಂದಿದೆ.<br><br>ಅನುಮೋದನೆಯಾದ ಕ್ರಿಯಾ ಯೋಜನೆಯನ್ನು ನಿಯಮಾನುಸಾರ ಅನುಷ್ಠಾನಿಸಿ, ಗುತ್ತಿಗೆದಾರರಿಗೆ ಅಂತಿಮ ಬಿಲ್ ಪಾವತಿಸಿದ ನಂತರ ಉಳಿತಾಯವಾದ ಮೊತ್ತವು ನಗರ ಸ್ಥಳೀಯ ಸಂಸ್ಥೆಗಳ ಖಾತೆಯಲ್ಲಿರುತ್ತದೆ. 14ನೇ ಹಣಕಾಸು ಆಯೋಗದ 2019-20ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಆ ಸಾಲಿನಲ್ಲಿಯೇ ಪೂರ್ಣವಾಗಿ ಬಿಡುಗಡೆಗೊಳಿಸಲಾಗಿದೆ. ಉಳಿತಾಯವಾದ ಮೊತ್ತವು ನಗರ ಸ್ಥಳೀಯ ಸಂಸ್ಥೆಯ ಖಾತೆಯಲ್ಲಿರುತ್ತದೆ. |

| | | |
|---|---|---|
| ಇ) | ಉಪ-ವಿಭಾಗಾಧಿಕಾರಿಗಳು ಚಿಕ್ಕೋಡಿ ಮತ್ತು ಆಡಳಿತಾಧಿಕಾರಿ ಪುರಸಭೆ ಹಾರೋಗೇರಿ ಇವರುಗಳು ಕಳುಹಿಸಿರುವ ಪ್ರಸ್ತಾವನೆಗೆ ಅನುಮೋದನೆ ನೀಡದಿರಲು ಕಾರಣವೇನು? | ಹಾರೋಗೇರಿ ಪುರಸಭೆಯ 2019-20ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಡಿ ಉಳಿತಾಯವಾದ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ಉಪವಿಭಾಗಾಧಿಕಾರಿ, ಚಿಕ್ಕೋಡಿ ಹಾಗೂ ಆಡಳಿತಾಧಿಕಾರಿ, ಪುರಸಭೆ ಹಾರೋಗೇರಿ ಇವರ ಅನುಮೋದನೆಯೊಂದಿಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರಿಗೆ ಸಲ್ಲಿಸಿದ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪರಿಶೀಲಿಸಿ ಸರ್ಕಾರದ ಅನುದಾನ ಬಳಸಲು ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿರುವುದರಿಂದ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಿ ಮರು ಸಲ್ಲಿಸಲು ಸೂಚಿಸಿ ದಿನಾಂಕ 21-09-2022ರ ಪತ್ರದಲ್ಲಿ ಹಿಂದಿರುಗಿಸಲಾಗಿದೆ. |

ಸಂಖ್ಯೆ:ನಅಇ 62 ಎಸ್‌ಎಫ್‌ಸಿ 2023

[ಎನ್. ನಾಗರಾಜ್ (ಎಂ.ಟಿ.ಬಿ)]
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು